sdmimd

**Vijaya Karnataka (Namma Mysooru)**

Date: Saturday, March 22, 2014 Page No.7

Edition: Mysore Language: Kannada

ಎಸ್‌ಡಿಎಂ ಐಎಂಡಿ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬಿದ ಸುಬ್ರತೋ ಬಗ್ಚಿ

# ಬದುಕಿನ ಏರಿಳಿತ ದಿಟ್ಟವಾಗಿ ಎದುರಿಸಿ

■ **ವಿಕ ಸುದ್ದಿಲೋಕ, ಮೈಸೂರು**

''ದಶಕದ ಹಿಂದೆ ಬೆಂಗಳೂರಿನ ನನ್ನ ಮನೆಯಿಂದ ಬನಶಂಕರಿಯಲ್ಲಿದ್ದ ಕಚೇರಿಗೆ ಹೋಗುತ್ತಿದ್ದೆ. ಆಗ ತಳ್ಳುಗಾಡಿಯಲ್ಲಿ ಟೊಮೊಟೋ ಮಾರುತ್ತಿದ್ದ ವ್ಯಕ್ತಿ ರಸ್ತೆಯನ್ನು ದಾಟುತ್ತಿದ್ದಾಗ ಒಮ್ಮೆಲೇ ಟೊಮೆಟೋ ರಸ್ತೆ ಮೇಲೆ ಉರುಳಿ ಬಿತ್ತು. ಸ್ವಲ್ಪ ಹೊತ್ತಿನಲ್ಲೇ ಹಸಿರು ಸಿಗ್ನಲ್ ಬಿದ್ದ ಕಾರಣ ವಾಹನಗಳು ರಸ್ತೆ ಮೇಲೆ ಬಿದ್ದ ಟೊಮೊಟೋದ ಮೇಲೇರಿ ಹೋದವು. ಕ್ಷಣ ಮಾತ್ರದಲ್ಲಿ ಟೊಮೆಟೋ ವಾಹನಗಳ ಚಕ್ರದಡಿ ಸಿಲುಕಿ ಅಪ್ಪಚ್ಚಿಯಾದವು. ಆದರೆ ಇದರಿಂದ ಸಾಲ ಮಾಡಿ ಹೊಸೂರಿನಿಂದ ಟೊಮೆಟೋ ಮಾರಲು ತಂದಿದ್ದ ವ್ಯಕ್ತಿ ಧೃತಿಗೆಡಲಿಲ್ಲ. ಮತ್ತೆ ಬದುಕಿನ ಬಂಡಿ ನಡೆಸಲು ದಿಟ್ಟ ಹೆಜ್ಜೆ ಹಾಕಿದ!''

ಹೀಗೆ ಕಥೆ ಹೇಳಿ ಘಟಿಕೋತ್ಸವದಲ್ಲಿ ಪದವಿ ಪಡೆಯಲು ಬಂದಿದ್ದ ವಿದ್ಯಾರ್ಥಿಗಳತ್ತ ದೃಷ್ಟಿ ನೆಟ್ಟರು ಮೈಂಡ್‌ಟ್ರಿ ಲಿಮಿಟೆಡ್‌ನ ಅಧ್ಯಕ್ಷ ಸುಬ್ರತೋ ಬಗ್ಚಿ. ಕುತೂಹಲದಿಂದ ಕಥೆ ಕೇಳುತ್ತಿದ್ದ ವಿದ್ಯಾರ್ಥಿಗಳು ಸುಬ್ರತೋ ಬಗ್ಚಿ ಅವರ ಮಾತಿಗಾಗಿ ಕಾಯುತ್ತಿದ್ದರು.

''ಒಬ್ಬ ಸಾಮಾನ್ಯ ಮನುಷ್ಯ ಜೀವನದ ಏರಿಳಿತಗಳನ್ನು ಎದುರಿಸಬಲ್ಲನಾದರೆ, ವಿದ್ಯಾವಂತರಾದ ವ್ಯಕ್ತಿಗಳು ಬದುಕಿನ ಏರಿಳಿತಗಳನ್ನು ಎದುರಿಸಲು ಯಾಕೆ ಹಿಂಜರಿಯಬೇಕು?'' ಹೀಗೆಂದು ಸುಬ್ರತೋ ಬಗ್ಚಿ ಮಾತು ಮುಗಿಸಿದಾಗ ವಿದ್ಯಾರ್ಥಿಗಳಿಂದ ಚಪ್ಪಾಳೆಯ ಸುರಿಮಳೆಯೇ ಆಯಿತು.

ನಗರದ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂ ಐಎಂಡಿಯಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾದ 19ನೇ ವಾರ್ಷಿಕ ಘಟಿಕೋತ್ಸವದಲ್ಲಿ ಘಟಿಕೋತ್ಸವ ಭಾಷಣ ಮಾಡಿದ ಸುಬ್ರತೋ ಬಗ್ಚಿ ತಮ್ಮ ಜೀವನದಲ್ಲಿ ನಡೆದ ಘಟನೆಗಳ ಮೂಲಕವೇ ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬುವ ಕೆಲಸ ಮಾಡಿದರು. ಜೀವನವನ್ನು ಹೇಗೆ ಎದುರಿಸಬೇಕು ಎನ್ನುವ ಬಗ್ಗೆ ಸಲಹೆ ನೀಡಿದರು.

ವಿಕ ಚಿತ್ರಲೋಕ




ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂ ಐಎಂಡಿಯಲ್ಲಿ ಶುಕ್ರವಾರ ನಡೆದ 19ನೇ ವಾರ್ಷಿಕ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ಸಂತಸದಲ್ಲಿ ಪಿಜಿಡಿಎಂ ಪದವೀಧರ ವಿದ್ಯಾರ್ಥಿಗಳು. ಮೈಂಡ್‌ಟ್ರಿ ಲಿಮಿಟೆಡ್‌ನ ಅಧ್ಯಕ್ಷ ಸುಬ್ರತೋ ಬಗ್ಚಿ, ಎಸ್‌ಡಿಎಂ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಪ್ರೊ.ಎಸ್.ಪ್ರಭಾಕರ್, ಸಂಸ್ಥೆ ನಿರ್ದೇಶಕ ಡಾ.ಎನ್.ಆರ್.ಪರಶುರಾಮ್ ಇದ್ದರು.